SRI S. R. BOMMAI.—Now, I am making a specific request. Under the present circumstances, I would like the Government to entrust this matter to the C.O.D. so that there would be a fair enquiry. It is not the jewellery that has been stolen. It is the investigation records that have been stolen. In such cases when it involves such an important matter, I would like the Government to entrust this matter to the State COD so that there would be a fair enquiry.

SRI R. GUNDU RAO.—At tnis stage it does not arise, because the investigation is on.

ಶ್ರೀ ಕೆ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ...

MR. SPEAKER.—The portion of sentence make objection to will not go into record. We shall take it up on Tuesday, Sri K.Madegowda

ಶ್ರೀ ಕೆ. ಮಾದೇಗೌಡ —ಆಗಬಹುದು.

ಅಧ್ಯಕ್ಷರು —ಈಗ ಶ್ರೀಮತಿ ಅನುಸೂಯ ಗಜಾನನ ಶರ್ಮರವರ 'ಪ್ರೆಸೆಂಟೇಷನ್ ಆಫ್ ಪಿಟಿಷನ್ಸ್'ನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

Presentation of Petitions

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಅದನ್ನು ನಾನೇ ಮಂಡಿಸುತ್ತೇನೆ. ಶ್ರೀಮತಿ ಅನುಸೂಯ ಗಜಾನನ ಶರ್ಮರವರ ಹೆಸರಿನಲ್ಲಿರತಕ್ಕಂಥ ೧೨ ಪಿಟಿಷನ್‌ಗಳನ್ನು ನಾನು ಈ ಸಭೆಯ ಮುಂದಿಡುತ್ತಿದ್ದೇನೆ.

MR. SPEAKER.—Petitions presented.

Represenation by Members

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಸಭಾಧ್ಯಕ್ಷರೇ, ಇತ್ತೀಚಿನ ವರದಿ ಪ್ರಕಾರ ಚುನಾವಣಾ ಆಯೋಗದವರು ಕಾಂಗ್ರೆಸ್ (ಯು) ಪಕ್ಷವನ್ನು ರಾಜಕೀಯ ಪಕ್ಷಗಳ ಪಟ್ಟಿಯಿಂದ ತೆಗೆದಿದ್ದಾರೆ.

ಅಧ್ಯಕ್ಷರು.—ನಿಮ್ಮ ಪಕ್ಷದ ಶ್ರೀ ಕೆಂಗೇಗೌಡರೂ ಸಹ ಈ ಬಗ್ಗೆ ನನಗೆ ಒಂದು ಪತ್ರವನ್ನು ಬರೆದಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅದಕ್ಕಾಗಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಆ ಪಕ್ಷದ ನಮ್ಮ ಸ್ನೇಹಿತರೆಲ್ಲಾ ಕಾಂಗ್ರೆಸ್ (ಯು) ಗುಂಪಿನಲ್ಲಿ ಕುಳಿತುಕೊಳ್ಳುತ್ತಿದ್ದರು ಅವರ ಪಕ್ಷವನ್ನು ಇಲ್ಲಿ ರಾಜಕೀಯ ಪಕ್ಷವಾಗಿ ಪರಿಗಣಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಆದ ಕ್ಕಾಗಿ ಅವರನ್ನು ಸ್ವತಂತ್ರರು ಎಂದು ಪರಿಗಣಿಸಿ ಅವರಿಗೆ ಇಲ್ಲಿ ಬೇರೆ ಬೇರೆ ಸೀಟುಗಳನ್ನು ಅಲಾಟ್ ಮಾಡಿಸಬೇಕೆಂದು ಈ ಸದನದ ಮೂಲಕ ಅರಿಕೆ ಮಾಡಿಕೊಳ್ಳತ್ತಿದ್ದೇನೆ.

ಶ್ರೀ ಕೆಂಗೇಗೌಡ.—ಸ್ವಾಮಿ, ಈ ವಿಚಾರದಲ್ಲಿ ನಾನೂ ಕೂಡ ಒಂದು ಕಾಗದವನ್ನು ತಮಗೆ ಬರೆದಿದ್ದೇನೆ.

ಅಧ್ಯಕ್ಷರು.—ತಾವು ನನಗೆ ಕಾಗದವನ್ನು ಬರೆದಿದ್ದೀರಿ. ಅದನ್ನು ನಾನು ಓದಿದ್ದೇನೆ.

ಶ್ರೀ ಕೆಂಗೇಗೌಡ.—ಮಾನ್ಯ ಅಧ್ಯಕ್ಷರೇ, ಚುನಾವಣಾ ಆಯೋಗದವರು ಕಾಂಗ್ರೆಸ್ (ಯು) ಪಕ್ಷವನ್ನು ರಾಜಕೀಯ ಪಕ್ಷಗಳ ಪಟ್ಟಿಯಿಂದ ತೆಗೆದಿರತಕ್ಕಂಥ ವಿಚಾರ ಪೇಪರ್‌ನಲ್ಲಿ ವರದಿಯಾಗಿದೆ.